


ಕ್ವಿಡ್ ಕಾರಿನ ಕ್ರಾಶ್ ಟೆಸ್ಟ್

ಹೀಗಾಗಿ ವೇಗ ಹೆಚ್ಚಾದರೆ ಚಾಲಕನಿಗೆ ಮತ್ತು ಪ್ರಯಾಣಿಕರಿಗೆ ಅದು ಗಮನ ಬರಬೇಕು. ಒಂದೊಮ್ಮೆ ಚಾಲಕ ಅದನ್ನು ನಿರ್ಲಕ್ಷಿಸಿದರೂ, ಪ್ರಯಾಣಿಕರು ಚಾಲಕನನ್ನು ಆ ಬಗ್ಗೆ ಎಚ್ಚರಿಸಲು ಅವಕಾಶ ಇರುತ್ತದೆ.

ರಿವರ್ಸ್ ಪಾರ್ಕಿಂಗ್ ಸೆನ್ಸರ್: ವಾಹನಗಳನ್ನು ಹಿಮ್ಮುಖವಾಗಿ ಚಲಾಯಿಸುವಾಗ ಅದಕ್ಕೆ ಅಡ್ಡವಾಗಿ ಯಾವುದೇ ವಸ್ತು, ವ್ಯಕ್ತಿ, ವಾಹನಗಳಿದ್ದಲ್ಲಿ ರಿವರ್ಸ್ ಪಾರ್ಕಿಂಗ್ ಸಂವೇದಕಗಳು ಚಾಲಕನಿಗೆ ಆ ಬಗ್ಗೆ ಎಚ್ಚರಿಕೆ ನೀಡುತ್ತವೆ. ಮನೆಯ ಬಳಿ ಹಿಮ್ಮುಖ ಚಾಲನೆ ಮಾಡುವಾಗ ಸಣ್ಣ ಮಕ್ಕಳು ಕಾರ್‌ಗಳಿಗೆ ಸಿಲುಕಿ ಮೃತಪಟ್ಟಿರುವ ಹಲವು ಅಪಘಾತಗಳು ದಾಖಲಾಗಿವೆ. ರಿವರ್ಸ್ ಪಾರ್ಕಿಂಗ್ ಸಂವೇದಕಗಳು ಇದ್ದಲ್ಲಿ, ಇಂತಹ ಅಪಘಾತಗಳನ್ನು ಗಣನೀಯ ಪ್ರಮಾಣದಲ್ಲಿ ತಪ್ಪಿಸಬಹುದು.

## ನಮ್ಮಲ್ಲೂ ಬರಲಿದೆ ರೇಟಿಂಗ್ ಪದ್ಧತಿ

ಕಾರ್‌ಗಳ ಕ್ರಾಶ್ ಟೆಸ್ಟ್ ಫಲಿತಾಂಶ ಮತ್ತು ಕಾರ್‌ಗಳಲ್ಲಿನ ಸುರಕ್ಷತಾ ಸವಲತ್ತುಗಳನ್ನು ಆಧರಿಸಿ ಅವುಗಳಿಗೆ ರೇಟಿಂಗ್ ನೀಡುವ ಪದ್ಧತಿ ಭಾರತದಲ್ಲೂ ಜಾರಿಗೆ ಬರಲಿದೆ. ಇದಕ್ಕಾಗಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ 'ಭಾರತ್ ನ್ಯೂ ಕಾರ್ ಅಸಸ್‌ಮೆಂಟ್ ಪ್ರೋಗ್ರಾಂ– ಭಾರತ್ ಎನ್‌ಸಿಎಪಿ'ಯನ್ನು ರೂಪಿಸಿದೆ.

ಭಾರತದಲ್ಲಿ ಮಾರಾಟವಾಗುವ ಹಲವು ಕಾರ್ ಮತ್ತು ಎಸ್‌ಯುವಿಗಳು ಗ್ಲೋಬಲ್ ಎನ್‌ಸಿಎಪಿ ಕ್ರಾಶ್ ಟೆಸ್ಟ್‌ನಲ್ಲಿ ಶೂನ್ಯ ರೇಟಿಂಗ್ ಪಡೆದಿದ್ದವು. ಆದರೆ ಭಾರತದ ಎಲ್ಲಾ ಕಾರ್‌ಗಳನ್ನು ಈ ಪರೀಕ್ಷೆಗೆ ಒಳಪಡಿಸುವುದು ಕಷ್ಟಸಾಧ್ಯ. ಹೀಗಾಗಿ ದೇಶದಲ್ಲಿಯೇ ಕ್ರಾಶ್ ಟೆಸ್ಟ್ ಸವಲತ್ತನ್ನು ನಿರ್ಮಿಸಲು ಸರ್ಕಾರ ಮುಂದಾಗಿದೆ. ಆಗ ಎಲ್ಲಾ ಕಂಪೆನಿಗಳೂ ತಮ್ಮ ಕಾರ್‌ಗಳನ್ನು ಕ್ರಾಶ್ ಟೆಸ್ಟ್‌ಗೆ ಒಳಪಡಿಸಬಹುದು.

ಭಾರತ್ ಎನ್‌ಸಿಎಪಿ ಅನ್ವಯ ಭಾರತದಲ್ಲಿ ತಯಾರಾಗುವ ಮತ್ತು ಮಾರಾಟವಾಗುವ ಎಲ್ಲಾ ಕಾರ್‌ಗಳು ಕ್ರಾಶ್ ಟೆಸ್ಟ್‌ಗೆ ಒಳಪಡಬೇಕಾಗುತ್ತದೆ. ಇಲ್ಲಿ ಎರಡು ಹಂತದ ರೇಟಿಂಗ್ ವ್ಯವಸ್ಥೆ ಇರಲಿದೆ. 56 ಕಿ.ಮೀ/ಗಂಟೆ ವೇಗದಲ್ಲಿ ನಡೆಯುವ ಕ್ರಾಶ್ ಟೆಸ್ಟ್ ಪೂರೈಸುವ ಕಾರ್‌ಗಳಿಗೆ 0.5ರಿಂದ 4.5 ಸ್ಟಾರ್ ರೇಟಿಂಗ್ ನೀಡಲಾಗುತ್ತದೆ. ಇನ್ನು 64 ಕಿ.ಮೀ/ಗಂಟೆ ವೇಗದಲ್ಲಿ ನಡೆಯುವ ಕ್ರಾಶ್ ಟೆಸ್ಟ್‌ಗಳನ್ನು ಪೂರೈಸುವ ಕಾರ್‌ಗಳಿಗೆ 1ರಿಂದ 5 ಸ್ಟಾರ್ ರೇಟಿಂಗ್ ನೀಡಲಾಗುತ್ತದೆ. ಇದರ ಜತೆಯಲ್ಲೇ ಕಾರ್‌ಗಳ ಸೈಡ್ ಇಂಪಾಕ್ಟ್ ಟೆಸ್ಟ್ (ಕಾರ್ ಇಕ್ಕೆಲಗಳ ಸದೃಢತೆ ಪರೀಕ್ಷೆ) ಸಹ ನಡೆಯಲಿದೆ. ಈ ಪರೀಕ್ಷೆಯನ್ನೂ ಕಾರುಗಳು ಯಶಸ್ವಿಯಾಗಿ ಪೂರೈಸಬೇಕಾಗುತ್ತದೆ. ಇದಕ್ಕೂ ಪ್ರತ್ಯೇಕ ರೇಟಿಂಗ್ ಇರಲಿದೆ.

ಮುಖ್ಯವಾಗಿ ಭಾರತ್ ಎನ್‌ಸಿಎಪಿಯಲ್ಲಿ ಪಾದಚಾರಿಗಳ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಇದರ ಅನ್ವಯ ಕಾರ್‌ಗಳ ಮುಂಬದಿಯ ಬಂಪರ್‌ನ ವಿನ್ಯಾಸ ಈಗಿನದಕ್ಕಿಂತ ಬದಲಾಗಬೇಕಾಗುತ್ತದೆ. ಬಂಪರ್‌ಗಳು ತೆಳುವಾಗಿರಬೇಕು ಮತ್ತು ಡಿಕ್ಕಿ ಸಂಭವಿಸಿದಾಗ ಪಾದಚಾರಿ ಅಥವಾ ಪ್ರಾಣಿಗಳು ಮೇಲಕ್ಕೆ ಚಿಮ್ಮಿ ಕಾರ್‌ನ ಬಾನೆಟ್ ಮತ್ತು ಮುಂಬದಿಯ ಗಾಜಿನ ಮೇಲೆ ಬೀಳುವಂತಿರಬೇಕು. ಬದಲಿಗೆ ಪಾದಚಾರಿ ಮತ್ತು ಪ್ರಾಣಿಗಳು ಡಿಕ್ಕಿ ವೇಳೆ ಕಾರ್‌ನ ಕೆಳಕ್ಕೆ ಹೋದರೆ, ಅಂತಹ ಕಾರ್ ಈ ಪರೀಕ್ಷೆಯಲ್ಲಿ ನಪಾಸಾಗುತ್ತದೆ. ಕಾರ್‌ಗಳು ಪ್ರತಿ ಲೀಟರ್

## 'ಕ್ರಾಶ್‌ಟೆಸ್ಟ್: ಮೊದಲ ಕಂಪೆನಿ'

ಸರ್ಕಾರ ಜಾರಿಗೆ ತರಲಿರುವ ಭಾರತ್ ಎನ್‌ಸಿಎಪಿ ಮತ್ತು ಕಾರ್‌ಗಳಲ್ಲಿ ಕಡ್ಡಾಯಗೊಳಿಸಿರುವ ಇತರ ಸವಲತ್ತುಗಳ ಬಗ್ಗೆ ಕೇಳಲಾದ ಪ್ರಶ್ನೆಗೆ ಟಾಟಾ ಮೋಟಾರ್ಸ್ ವಕ್ತಾರರು ಉತ್ತರಿಸಿದ್ದಾರೆ.

★ ಏರ್‌ಬ್ಯಾಗ್, ಎಬಿಎಸ್ ಅಳವಡಿಸಿದರೆ ಕಾರ್‌ಗಳ ಬೆಲೆ ಹೆಚ್ಚಲಿದೆ. ಈ ಸವಲತ್ತುಗಳನ್ನು ನೀಡಿ, ಸ್ಪರ್ಧಾತ್ಮಕ ಬೆಲೆಯಲ್ಲಿ ಕಾರ್‌ಗಳನ್ನು ಮಾರಾಟ ಮಾಡಲು ಸಾಧ್ಯವೆ?

ವಕ್ತಾರ: ಸುರಕ್ಷತೆ ಟಾಟಾ ಮೋಟಾರ್ಸ್‌ನ ಅತ್ಯಂತ ಆದ್ಯತೆಯ ವಿಷಯ. 1997ರ ಆಗಸ್ಟ್‌ನಲ್ಲಿ ನಮ್ಮದೇ ಆದ ಕ್ರಾಶ್ ಟೆಸ್ಟ್ ವ್ಯವಸ್ಥೆಯನ್ನು ನಾವು ಅಳವಡಿಸಿಕೊಂಡಿದ್ದೇವೆ. ಭಾರತದಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಿಕೊಂಡ ಮೊದಲ ಕಂಪೆನಿ ನಮ್ಮದು. ಭಾರತದ ರಸ್ತೆಯ ಪರಿಸ್ಥಿತಿಯಲ್ಲಿ ಸುರಕ್ಷಿತವಾಗಿ ನಿಲ್ಲುವಂತೆ ನಮ್ಮ ಎಲ್ಲಾ ಕಾರ್‌ಗಳನ್ನು ರೂಪಿಸಲಾಗಿದೆ. ಗ್ಲೋಬಲ್ ಎನ್‌ಸಿಎಪಿ ನಡೆಸಿದ ಕ್ರಾಶ್ ಟೆಸ್ಟ್‌ನಲ್ಲಿ ನಮ್ಮ ಝೆಸ್ಟ್ ಎಕ್ಸ್‌ಟಿ ಕಾರ್ 4 ತಾರೆ (ಸ್ಟಾರ್) ರೇಟಿಂಗ್ ಪಡೆದಿದೆ. ಇದು, ಗ್ರಾಹಕರಿಗೆ ಸುರಕ್ಷಿತ ಕಾರ್ ನೀಡುತ್ತಿರುವ ನಮ್ಮ ಬದ್ಧತೆಗೆ ದೊರೆತ ಮನ್ನಣೆ.

★ ನೂತನ 'ಭಾರತ್ ಎನ್‌ಸಿಎಪಿ' ನಿಯಮಗಳನ್ನು ಪೂರೈಸಲು ನಿಮ್ಮ ಕಂಪೆನಿ ಹೇಗೆ ಸಿದ್ಧತೆ ನಡೆಸಿದೆ?